# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1596 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪಿ.ಹೆಚ್. ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗ್ರಾಮಗಳ ಗ್ರಾಮಠಾಣೆಯನ್ನು ವಿಸ್ತರಿಸದಿರಲು ಕಾರಣಗಳೇನು; | ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮಿನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ ಪ್ರದೇಶಗಳನ್ನು (ಗ್ರಾಮಠಾಣಾ ವನ್ನು) ಜಮೀನು ಸ್ಥಿತಿಯಂತೆ ಗುರ್ತಿಸಿ ಗ್ರಾಮ ನಕಾಶೆಯಲ್ಲಿ "ಊರು" ಎಂದು ದಾಖಲಿಸಲಾಗಿದೆ.<br>ಗ್ರಾಮಠಾಣ ವಿಸ್ತರಣೆ ಕುರಿತು ದಿನಾಂಕ: 28-10-2016 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಇಲಾಖೆ ಜಂಟಿ ಸುತ್ತೋಲೆ ನೀಡಿರುತ್ತದೆ. ಸದರಿ ಸುತ್ತೋಲೆಯಂತೆ ಹಾಗೂ ಲಭ್ಯವಿರುವ ಕಾನೂನಿನ್ವಯ ಈಗಾಗಲೇ ಅಳತೆಗೊಂಡು ಸರ್ವೆ ನಂಬರು ನೀಡಲಾದ ಪ್ರದೇಶವನ್ನು "ಗ್ರಾಮಠಾಣ" ಎಂದು ಪರಿವರ್ತಿಸಿ ವಿಸ್ತರಿಸಲು ಕರ್ನಾಟಕ ಭೂಕಂದಾಯ ನಿಯಮಾವಳಿ ಗಳನ್ವಯ ಅವಕಾಶವಿರುವುದಿಲ್ಲ. |
| ಆ) | ಗ್ರಾಮಠಾಣೆಗಳಿಗೆ ಹೊಂದಿ ಕೊಂಡಿರುವ ಸರ್ವೇ ನಂಬರುಗಳ ಜಮೀನುಗಳಲ್ಲಿ ಇರುವ ಮನೆಗಳು / ಗ್ರಾಮಗಳನ್ನು ಪರಿಗಣಿಸಿ ಗ್ರಾಮಠಾಣೆ ವಿಸ್ತರಿಸಲು ಇರುವ ಸಮಸ್ಯೆಗಳೇನು; (ವಿವರವಾಗಿ ಮಾಹಿತಿ ನೀಡುವುದು) | ಈಗಾಗಲೇ ಅಳತೆಯಾಗಿ ಸರ್ವೆ ನಂಬರುಗಳನ್ನು ನೀಡಲಾದ ಪ್ರದೇಶವನ್ನು ಗ್ರಾಮಠಾಣ ಎಂದು ಪರಿವರ್ತಿಸಲು ಭೂಕಂದಾಯ ಕಾನೂನಿನ್ವಯ ಅವಕಾಶವಿರುವುದಿಲ್ಲ. ಸರ್ವೆ ನಂಬರುಗಳನ್ನು ನೀಡಲಾದ ಗ್ರಾಮಠಾಣಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಮನೆಗಳಿದ್ದರೂ ಅವುಗಳ ಬಳಕೆ ಬದಲಾಗುವುದಿಲ್ಲ. ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 95 (ಭೂಪರಿವರ್ತನೆ) ಕಲಂ 109 ಮೊದಲಾದವುಗಳು ಅನ್ವಯವಾಗುತ್ತವೆ.<br>ಗ್ರಾಮಠಾಣ ವಿಸ್ತರಣೆ ಮಾಡಿದರೆ ಭೂಪರಿವರ್ತನೆಯ ಅಗತ್ಯವಿಲ್ಲ ಎಂಬ ತಪ್ಪು ಗ್ರಹಿಕೆ ಇರುತ್ತದೆ. ಆದರೆ ಗ್ರಾಮಠಾಣ ವಿಸ್ತರಣೆ ಮೂಲಕ ಭೂಪರಿವರ್ತನೆಯಾಗದ ಹೊರತು ಭೂಬಳಕೆ ಬದಲಾವಣೆಗೆ ಕಾನೂನಿನ ಪ್ರಕಾರ ಯಾವುದೇ ವಿನಾಯಿತಿ ದೊರೆಯುವುದಿಲ್ಲ. |
| ಇ) | ಗ್ರಾಮದಲ್ಲಿ ನಿರ್ಮಿಸಿರುವ ಮನೆಗಳಿಗೆ ಇ-ಸ್ವತ್ತು ನೀಡುತ್ತಿದ್ದು, ಬಿ-ಖಾತೆಯಿಂದ ಎ-ಖಾತೆ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ನಿಯಮ 5 ರಲ್ಲಿನ ವರ್ಗೀಕರಣಗಳಲ್ಲಿ ಗ್ರಾಮ ಠಾಣಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅನುಬಂಧ- 1 ರಲ್ಲಿ ನಮೂನೆ 11ಎ ವಿತರಣೆಗೆ ಈ ಕೆಳಕಂಡ ದಾಖಲೆಗಳನ್ನು ಮಾತ್ರ ಕಡ್ಡಾಯ ಮಾಡಲಾಗಿರುತ್ತದೆ.<br><br>1. ದಿಶಾಂಕ್/ ತಹಶೀಲ್ದಾರರ ಗ್ರಾಮಠಾಣಾ ನಕ್ಷೆ. |

| | | |
|---|---|---|
| | | 2. ಕ್ರಯಪತ್ರ/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್‌ಡೀಡ್/ವಿಲ್/ಹಕ್ಕುಪತ್ರ/ವರ್ಗಾವಣೆ/ರಿಲೀಸ್ ಡೀಡ್/ಸೆಟ್ಲಮೆಂಟ್/ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು /ವಿಭಾಗ ಪತ್ರ/ ಅದಲು ಬದಲು ಪತ್ರ.<br><br>ಮೇಲ್ಕಂಡ ದಾಖಲೆಗಳಲ್ಲಿ ದಿಶಾಂಕ್/ ತಹಶೀಲ್ದಾರರ ಗ್ರಾಮಠಾಣಾ ನಕ್ಷೆ ಯೊಂದಿಗೆ ಇನ್ನುಳಿದ ಯಾವುದಾದರೂ ಒಂದು ದಾಖಲೆಯನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಇಂಡೀಕರಿಸುವ ಮೂಲಕ ನಮೂನೆ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ) | ಗ್ರಾಮಠಾಣಾ ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾಗಿ ಮಾಹಿತಿ ನೀಡುವುದು) | ಗ್ರಾಮ ಠಾಣಾದಲ್ಲಿ ತೆರಿಗೆ ನಿರ್ಧರಣೆ ಪಟ್ಟಿಗೆ ಒಳಪಟ್ಟಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿಯನ್ನು ಕೋರಿ ಬರುವ ಅರ್ಜಿಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಲು ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಜಂಟಿ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ.<br>ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶವನ್ನು ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ, ಗ್ರಾಮ ಠಾಣಾವನ್ನು ಪುನರ್ ನಿಗಧಿಪಡಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಸದರಿ ಸುತ್ತೋಲೆಯಂತೆ ಲಭ್ಯವಿರುವ ಕಾನೂನಿನ್ವಯ-ಅವಕಾಶವಿರುವುದಿಲ್ಲ. ಈಗಾಗಲೇ ಅಳತೆಗೊಂಡು ಸರ್ವೆ ನಂಬರು ನೀಡಲಾದ ಪ್ರದೇಶವನ್ನು "ಗ್ರಾಮಠಾಣ" ಎಂದು ಪರಿವರ್ತಿಸಿ ವಿಸ್ತರಿಸಲು ಕರ್ನಾಟಕ ಭೂಕಂದಾಯ ನಿಯಮಾವಳಿಗಳನ್ವಯ ಅವಕಾಶವಿರುವುದಿಲ್ಲ. |

ಸಂಖ್ಯೆ: ಕಂಇ 59 ಎಸ್ ಎಸ್ ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು